

# ಗದಾನ್ಸ್ಕ್

## ಮೋಟ್ಲಾವಾ ನದಿತಟದ ಸುಂದರ ನಗರ

**‘ಅಂಬರ್ ಕಲ್ಲುಗಳ ರಾಜಧಾನಿ’ ಎಂದೇ ವಿಶ್ವ ಪ್ರಸಿದ್ಧಿ ಪಡೆದ ಊರು ಗದಾನ್ಸ್ಕ್. ಪೋಲೆಂಡ್‌ನ ತ್ರಿವಳಿ ನಗರಗಳಲ್ಲಿ ಒಂದಾದ ಗದಾನ್ಸ್ಕ್, ಮೋಟ್ಲಾವಾ ನದಿ, ಸಮುದ್ರ ಸೇರುವ ಜಾಗದಲ್ಲಿ ಹರಡಿಕೊಂಡ ಪರಿ ಕಲಾಕೃತಿಯಂತೆ ಕಾಣುತ್ತದೆ.**

■ **ಸುಚೇತಾ ಕೆ. ನಾರಾಯಣ್**

ಬಾಲ್ಟಿಕ್ ಸಮುದ್ರದ ಅಂಚಿನಲ್ಲಿರುವ ಪೋಲೆಂಡ್ ದೇಶದ ತ್ರಿವಳಿ ನಗರಗಳಾದ ಗದಾನ್ಸ್ಕ್, ಗಿದಿನಿಯ ಹಾಗೂ ಸೊಪೊಟ್‌ಗೆ ಪ್ರದಕ್ಷಿಣೆ ಹಾಕಿದ ವಿಮಾನ ನೆಲ ಮುಟ್ಟಿದಾಗ ಕತ್ತಲು ಕವಿದಿತ್ತು. ಕತ್ತಲೆಯನ್ನು ಓಡಿಸಲು ಪೈಪೋಟಿಗಿಳಿದಂತೆ ಜಗಮಗಿಸುವ ಸಾಲುಸಾಲು ವಿದ್ಯುತ್ ದೀಪಗಳ ಪ್ರಕಾಶ, ವಿಮಾನ ನಿಲ್ದಾಣದ ಸುತ್ತಮುತ್ತ ಕೃತಕ ಬೆಳಗನ್ನೇ ಸೃಷ್ಟಿಸಿದ್ದವು.

ನಮ್ಮ ಚೀಲಗಳನ್ನೆಲ್ಲ ಹೆಗಲಿಗೇರಿಸಿಕೊಂಡು ನಿಲ್ದಾಣದ ಹೊರಬಂದೆವು. ಬೇಸಿಗೆ ಕಾಲವಾಗಿತ್ತಾದರೂ ಜಿಟಿಜಿಟಿ ಮಳೆ ಬೀಳುತ್ತಿದ್ದುದರಿಂದ ತಣ್ಣಗೆನಿಸುತ್ತಿತ್ತು. ವಿಮಾನ ನಿಲ್ದಾಣದಿಂದ ನಗರಕ್ಕೆ ಸಂಪರ್ಕ ಕಲ್ಪಿಸುವ ಬಸ್ ಹಿಡಿದು, ಕತ್ತಲಲ್ಲಿ ನಿರ್ಜನ ರಸ್ತೆಗಳಲ್ಲಿ ಸಾಗಿ, ನಾವು ಕಾಯ್ದಿರಿಸಿದ್ದ ಅಪಾರ್ಟ್‌ಮೆಂಟ್ ಸೇರಿದೆವು.

ಗದಾನ್ಸ್ಕ್ ನಗರದಲ್ಲಿ ನಮ್ಮ ಮೊದಲ ದಿನ. ಬೆಳಿಗ್ಗೆ ಹತ್ತಿರವಿದ್ದ ಮಾರುಕಟ್ಟೆಯಲ್ಲಿ ಬೆಳಗ್ಗಿನ ತಿಂಡಿಗೆ ಬೇಕಾದ ವಸ್ತುಗಳನ್ನು ತಂದು ಅಡುಗೆ ಮಾಡಿಕೊಂಡೆವು. ನಂತರ ಊರು ನೋಡಲು ಹೊರಟೆವು. ನಿರಭ್ರ ಆಕಾಶ ಎಳೆಬಿಸಿಲನ್ನು ಎಲ್ಲೆಲ್ಲೂ ಹರಡಿ ಉತ್ಸಾಹ ಹೆಚ್ಚಿಸಿತ್ತು.

ಪೋಲೆಂಡ್ ದೇಶದ ಉತ್ತರ ಭಾಗದಲ್ಲಿರುವ ಪೊಮೆರೇನಿಯ ಪ್ರಾಂತ್ಯದ ರಾಜಧಾನಿ ಗದಾನ್ಸ್ಕ್. ಪೊಮೆರೇನಿಯ ಎಂಬ ಹೆಸರನ್ನು ಎಲ್ಲೋ ಕೇಳಿದ್ದೇವಲ್ಲ ಎಂದು ನೀವಂದುಕೊಂಡರೆ,

